ಈ ಸಾಕ್ಷಿಯನ್ನು ತಾ : **16.03.2017** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 8 ಮತ್ತು 9 ನೇ ಪ್ರತಿವಾದಿ ಪರ ವಕೀಲರಿಂದ

ನನ್ನ ಸ್ವಂತ ಊರು ಅಜ್ಜೀಪುರ ಆಗಿರುತ್ತದೆ. ನಾನು ಕಳೆದ ಇಪ್ಪತ್ತು ವರ್ಷದಿಂದ ಮಂಡ್ಯ ಜಿಲ್ಲೆಯಲ್ಲಿ ವಾಸಿಸುತ್ತಿದ್ದೇನೆ. ಅಜ್ಜೀಪುರದಲ್ಲಿ ನನಗೆ ಸಂಬಂಧಿಸಿದ ಮನೆ ಇರುವುದಿಲ್ಲ ಆದರೆ ಬಾಡಿಗೆ ಮನೆ ಮಾಡಿಕೊಂಡು ಇದ್ದೇನು ಎಂದು ನುಡಿಯುತ್ತಾರೆ. 1 ರಿಂದ 7 ನೇ ಪ್ರತಿವಾದಿಯವರಿಗೂ ಕೂಡ ಸ್ವಂತ ಮನೆ ಇದೆ. 1 ರಿಂದ 7 ನೇ ಪ್ರತಿವಾದಿಯವರು ಮಂಡ್ಯ ಜಿಲ್ಲೆಯಲ್ಲಿ ಬೇರೆ ಬೇರೆ ಕಡೆ ವಾಸಿಸುತ್ತಿದ್ದಾರೆ.

2. ಕಳೆದ ಐವತ್ತು ವರ್ಷದಿಂದ ಈವರೆಗೂ ನಾನೇ ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಸಾಗುವಳಿ ಮಾಡುತ್ತಿದ್ದೇನೆ. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಖಾತೆ ನನ್ನ ಹೆಸರಿನಲ್ಲಿ ಈವರೆಗೂ ಇದೆ. ದಾವಾ ಷೆಡ್ಯೂಲ್ ಸ್ವತ್ತನ್ನು 1967 ನೇ ಇಸವಿಯಲ್ಲಿ ನಾನು ಕ್ರಯಕ್ಕೆ ಪಡೆದುಕೊಂಡ ನಂತರದಲ್ಲಿ ಸದರಿ ಸ್ವತ್ತಿಗೆ ಸಂಬಂಧಿಸಿದ ಆರ್‌ಟಿಸಿ ಮತ್ತು ಇತರೆ ದಾಖಲೆಗಳು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿದೆ ಸಾಕ್ಷಿ ಮುಂದುವರೆದು ನನ್ನ ಹೆಸರಿನಲ್ಲಿ ಇದೆ ಎಂದು ನುಡಿಯುತ್ತಾರೆ. ಮತ್ತು 9 ನೇ ಪ್ರತಿವಾದಿಯವರು ದಾವಾ ಷೆಡ್ಯೂಲ್ ಸ್ವತ್ತನ್ನು ತಾವು ಕ್ರಯಕ್ಕೆ ಪಡೆದುಕೊಂಡಿರುತ್ತೇವೆ ಎಂದು ಹೇಳಿ ಪೂಜೆ ಮಾಡಿದ್ದರಿಂದ ಅವರ ವಿರುದ್ಧ ಈ ದಾವೆಯನ್ನು ದಾಖಲಿಸಿರುತ್ತೇನೆ. 2011 ನೇ ಇಸವಿಯಲ್ಲಿ 8 ಮತ್ತು 9 ನೇ ಪ್ರತಿವಾದಿಯವರು ತಾವು ಕ್ರಯಕ್ಕೆ ಪಡೆದುಕೊಂಡಿರುತ್ತೇವೆ ಎಂದು ಹೇಳಿದರು. 4 ಮತ್ತು 7 ನೇ ಪ್ರತಿವಾದಿಯವರಿಂದ ಸ್ವತನ್ನು ಕ್ರಯಕ್ಕೆ ಪಡೆದುಕೊಂಡಿರುತ್ತೇವೆ ಎಂದು 8 ಮತ್ತು 9 ನೇ ಪ್ರತಿವಾದಿಯವರು ನನಗೆ ತಿಳಿಸಿದ್ದರು.

3. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ 1987-88 ರಲ್ಲಿ ನನ್ನ ಸಹೋದರರ ಹೆಸರಿನಲ್ಲಿ ಖಾತೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ತಾಯಿಗೆ ಒಟ್ಟು ಹನ್ನೇರಡು ಜನ ಮಕ್ಕಳು. 1987-88 ರ ಹಿಂದೆ ನಾನು ಮತ್ತು ನನ್ನ ಸಹೋದರರು ದಾವಾ ಷೆಡ್ಯೂಲ್ ಸ್ವತ್ತನ್ನು ವಿಭಾಗ ಮಾಡಿಕೊಂಡು ಸದರಿ ವಿಭಾಗದಂತೆ ನನಗೆ ಮತ್ತು ನನ್ನ ಸಹೋದರರಿಗೆ ತಲಾ ಅರವತ್ತೊಂಭತ್ತು ಸೆಂಟ್ ಜಮೀನು ಬಂದಿರುತ್ತದೆ ಎಂದರೆ ಸುಳ್ಳು. ನನ್ನ ಮತ್ತು ನನ್ನ ಸಹೋದರರ ನಡುವೆ ದಾವಾ ಷೆಡ್ಯೂಲ್ ಸ್ವತ್ತನ್ನು ವಿಭಾಗ ಮಾಡಿಕೊಂಡಿದ್ದರಿಂದಲೇ 1987 ರಲ್ಲಿ ಖಾಲೆ ಬದಲಾವಣೆ ಆದಾ ಬಗ್ಗೆ ಪ್ರಶ್ನಿಸಿರುವುದಿಲ್ಲ ಎಂದರೆ ಸುಳ್ಳು. ಖಾತೆ ಬದಲಾವಣೆ ಆಗಿರುವ ವಿಚಾರ ನನಗೆ ಈ ಮೊದಲೆ ಗೊತ್ತಿದ್ದರೂ ಕೂಡ ಖಾತೆ ಬದಲಾವಣೆ ಆಗಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1967 ನೇ ಸಾಲಿನಲ್ಲಿ ನಾನು ಮತ್ತು ನನ್ನ ಸಹೋದರರು ಜಂಟಿಯಾಗಿ ದಾವಾ ಷೆಡ್ಯೂಲ್ ಸ್ವತ್ತನ್ನು ನನ್ನ ಹೆಸರಿನಲ್ಲಿ ಕ್ರಯಕ್ಕೆ ಪಡೆದುಕೊಂಡಿರುತ್ತೇವೆ ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ತಲಾ ಅರವತ್ತೊಂಭತ್ತು ಸೆಂಟ್ಸ್ ಜಮೀನನ್ನು ನಾನು ಮತ್ತು ನನ್ನ ಸಹೋದರರು ವಿಭಾಗ ಮಾಡಿ ಕೊಂಡಿರುತ್ತೇವೆ ಎಂದರೆ ಸುಳ್ಳು.

4. ದಾವಾ ಷೆಡ್ಯೂಲ್ ಸ್ವತ್ತು ನನ್ನ ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು. ನನ್ನ ಮತ್ತು ನನ್ನ ಸಹೋದದರ ನಡುವೆ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ವಿಭಾಗವಾದ ನಂತರದಲ್ಲಿ ನನ್ನ ಭಾಗಕ್ಕೆ ಬಂದಂತಹ ಅರತ್ತೊಂಭತ್ತು ಸೆಂಟ್ಸ್ ಜಮೀನಿನಲ್ಲಿ ಮಾತ್ರ ಸಾಗುವಳಿ ಮಾಡುತ್ತಿದ್ದೇನೆ ಎಂದರೆ ಸುಳ್ಳು. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಐವತ್ತು ವರ್ಷದಿಂದ ನಡೆದ ಎಲ್ಲಾ ದಾಖಲೆಗಳು ನನ್ನ ಬಳಿ ಇದೆ. ನನ್ನ ಮತ್ತು ನನ್ನ ಸಹೋದರರ ಸಂಬಂಧ ಚೆನ್ನಾಗಿರುವುದಿಲ್ಲ. 1,4 ಮತ್ತು 7ನೇ ಪ್ರತಿವಾದಿಯವರಿಂದ 8 ಮತ್ತು 9 ನೇ ಪ್ರತಿವಾದಿಯವರು ಎರಡು ಎಕರೆ ಎಂಟು ಸೆಂಟ್ಸ್ ಜಮೀನನ್ನು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸುಳ್ಳು. ನಾನು ಮತ್ತು ನನ್ನ ಸಹೋದರರು ಚೆನ್ನಾಗಿ ಇದ್ದೇವೆ ಆದ್ದರಿಂದ ಈ ದಾವೆಯಲ್ಲಿ ಹಾಜರಾಗಿರುವುದಿಲ್ಲ ಎಂದರೆ ಸುಳ್ಳು. ನಾನು ಮತ್ತು ಉಳಿದ ಪ್ರತಿವಾದಿಗಳು ಮಾತನಾಡಿಕೊಂಡು ಉದೇಶದಿಂದಲೇ ಈ ದಾವೆಯಲ್ಲಿ ದಾಖಲಿಸಿರುತ್ತೇನೆ ಎಂದರೆ ಸುಳ್ಳು. 8 ಮತ್ತು 9 ನೇ ಪ್ರತಿವಾದಿಯವರು ಕ್ರಯಕ್ಕೆ ಪಡೆದುಕೊಂಡ ನಂತರದಿಂದ ಎರಡು

ಎಕರೆ ಎಂಟು ಸೆಂಟ್ಸ್ ಜಮೀನಿನ ಸ್ವಾಧೀನಾನುಭವ ಹೋಂದಿರುತ್ತಾರೆ ಎಂದರೆ ಸುಳ್ಳು. 1987-88 ರಲ್ಲಿ ದಾವಾ ಷೆಡ್ಯೂಲ್ ಸ್ವತ್ತು ಪೋಡಾಗಿರುತ್ತದೆ ಎಂದರೆ ಸುಳ್ಳು.

ಮುಂದುವರಿದ ಪಾಟೀ ಸವಾಲು : ಸಮಾಯಾವಕಾಶ ನೀಡಲಾಗಿದೆ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ,
ಓ ಹೇ ಕೇ ಸ ಇದೆ

(ಎನ್.ಬಿ. ಜಯಲಕ್ಷ್ಮಿ)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಕೊಳ್ಳೇಗಾಲ.